ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 45-48
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಆಧ್ಯಾತ್ಮಿಕ ಶಿವಶರಣ: ಉರಿಲಿಂಗ ಪೆದ್ದಿ

**ಡಾ. ಸೌಭಾಗ್ಯ ಶಿವಪುತ್ರಪ್ಪ**

ಕನ್ನಡ ಅತಿಥಿ ಪ್ರಾಧ್ಯಾಪಕರು, ಶರಣ ಸಾಹಿತ್ಯ ಗ್ರಂಥಾಲಯ ಮತ್ತು ಸಂಪನ್ಮೂಲ ಕೇಂದ್ರ, ಬಸವಕಲ್ಯಾಣ, ಬೀದರ ಜಿಲ್ಲೆ.

***Abstract:***

*ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯ ಪ್ರಮುಖವಾದುದುದಾಗಿದೆ. ಹನ್ನೆರಡನೆಯ ಶತಮಾನದ ಶರಣ–ಶರಣೆಯರು ಸೃಷ್ಟಿಸಿದ ವಚನ ಸಾಹಿತ್ಯವು ಸಮಾನತೆಗಾಗಿ ಸಕಲ ಜೀವಿಗಳ ಲೇಸನ್ನೇ ಬಿತ್ತಬಯಸಿ, ಅಸಮಾನತೆಯನ್ನು ಅಲ್ಲಗಳೆಯುತ್ತಾ, ಸಾಂಸ್ಕೃತಿಕ ಸರ್ವಾಧಿಕಾರ ಧೋರಣೆಯಿಂದ ಸಾಂಸ್ಕೃತಿಕ ಪ್ರಜಾಪ್ರಭುತ್ವದೆಡೆಗೆ, ಶ್ರಮ, ದಾನ, ದಾಸೊಹ, ಶೋಷಣಾರಹಿತ ಸಂಸ್ಕೃತಿಯೆಡೆಗೆ ಸಮಾಜವನ್ನು ಕೊಂಡೊಯ್ಯುವಂತೆ ವಚನ ಸಾಹಿತ್ಯ ಮಾಡಿದೆ. ಶತಶತಮಾನಗಳ ಕಾಲದಿಂದ ಬೆಂದು ಬಳಲಿದ ಶೋಷಣೆಗೊಳಗಾದ ಜನಸಮುದಾಯಗಳಿಗೆ ಧ್ವನಿಯಾಗಿ, ವೈಚಾರಿಕ ಶಕ್ತಿಯಾಗಿ ಅಕ್ಷರ ಲೋಕಕ್ಕೆ ತೊಡಗಿಸಿ ಅತ್ಯಂತ ಅರ್ಥಗರ್ಭಿತವಾಗಿ ಮಾತನಾಡ ವಂತೆ ಮಾಡಿದೆ. ಪ್ರಸ್ತುತ ಲೇಖನದಲ್ಲಿ ಶಿವಶರಣ ಉರಿಲಿಂಗ ಪೆದ್ದಿರವರ ಸಾಹಿತ್ಯವನ್ನು ಕುರಿತು ವಿಶ್ಲೇಷಿಸಲಾಗಿದೆ.*

**Keywords:** *ಶಿವಶರಣರು, ವಚನ ಸಾಹಿತ್ಯ, ಉರಿಲಿಂಗ ಪೆದ್ದಿ, ಸಾಮಾಜಿಕ ಕ್ರಾಂತಿ, ಹನ್ನೆರಡನೇ ಶತಮಾನ.*

**ಪೀಠಿಕೆ**

ಕನ್ನಡ ಸಾಹಿತ್ಯಕ್ಕೆ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಐತಿಹಾಸಿಕ ಚರಿತ್ರೆಯಿದೆ. ಅದರಲ್ಲಿ ಹನ್ನೆರಡನೆಯ ಶತಮಾನದ ಶರಣ–ಶರಣೆಯರು ಸೃಷ್ಟಿಸಿದ ವಚನ ಸಾಹಿತ್ಯ ಹಲವಾರು ಕಾರಣಗಳಿಂದಾಗಿ ಮಹತ್ವಪೂರ್ಣವಾಗಿ ಕಾಣುತ್ತದೆ. ಅನುಭಾವದ ವಿಚಾರ ಹಾಗೂ ಅಕ್ಷರ ಸಂಸ್ಕೃತಿಯ ಮುಖೇನ ಸಾಹಿತ್ಯೋ–ಸಾಮಾಜಿಕ ಚಳವಳಿಗಳಲ್ಲಿ ಜನಪರ, ಜೀವಪರ ಕಾಳಜಿಯನ್ನು ಹುದುಗಿಸಿಟ್ಟುಕೊಂಡಿತ್ತು. ಭಾರತೀಯ ಚರಿತ್ರೆಯಲ್ಲಿ ಮೊದಲ ಸಲ ಎನ್ನುವಂತೆ ಎಲ್ಲ ಕೆಳಜಾತಿ, ಕೆಳವರ್ಗಗಳ ಜನ ತಲೆ ಎತ್ತಿ ಸ್ವಾಭಿಮಾನದಿಂದ ತಮ್ಮ ಅಂತರಾಳದ ಭಾವನೆ, ಚಿಂತನೆ, ಅನುಭಾವದ ಮಾತುಗಳನ್ನು ಉವಾಚಿಸಿದರು. ಅವೇ ತತ್ವಗಳಾಗಿ, ಜೀವನ ಶೈಲಿಯಾಗಿ, ಸಾಹಿತ್ಯವಾಗಿ ಮೌಲೀಕರಣಗೊಂಡವು. ಆ ಚಿಂತನೆಗಳು ಸಮಕಾಲೀನ ಬದುಕಿನ ಜ್ವಲಂತ ಸಮಸ್ಯೆಗಳನ್ನು ಎತ್ತಿಕೊಂಡು ಚಿಂತನ–ಮಂಥನಕ್ಕೆ ಒಳಪಡಿಸಿವೆ. ಅಂದಿನ ಕಾಲದಲ್ಲಿ ವರ್ಣ–ವರ್ಗ ವ್ಯವಸ್ಥೆ ಸಮಾಜವನ್ನು ಒಡೆದು ಚುರುಚೂರಾಗಿಸಿತ್ತು. ಒಂದು ವರ್ಗ ತನ್ನ ವ್ಯಕ್ತಿತ್ವ ವಿಕಾಸಕ್ಕಾಗಿ ಮೂಲಭೂತ ಸೌಕರ್ಯಗಳನ್ನು ಪಡೆದರೆ, ಮತ್ತೊಂದು ವರ್ಗ ಸದಾ ವ್ಯಕ್ತಿತ್ವ ವಿಕಾಸದ ಅನುಕೂಲತೆಗಳನ್ನು ವಂಚಿಸುತ್ತಾ ಬಂದದ್ದು ಚರಿತ್ರೆಯಾಗಿದೆ. ಅಂತಹ ವಿಕೃತ ಮನಸ್ಥಿತಿಯ ಭೇದ–ಭಾವಗಳನ್ನು ವಿರೋಧಿಸಿದ ಚಳವಳಿ ಅದು ವಚನ ಚಳವಳಿ.

***Please cite this article as:*** ಸೌಭಾಗ್ಯ ಶಿವಪುತ್ರಪ್ಪ. (2023). ಆಧ್ಯಾತ್ಮಿಕ ಶಿವಶರಣ: ಉರಿಲಿಂಗ ಪೆದ್ದಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 2(5), 45–48.

ಹನ್ನೆರಡನೆಯ ಶತಮಾನದ ಕಲ್ಯಾಣ ನಗರವು ಆಧ್ಯಾತ್ಮಿಕ ಕೇಂದ್ರವಾಗಿತ್ತು. ಅದಕ್ಕೆ ಬಸವಣ್ಣ ಅರುಹಿನ ಮನೆ, ಮಹಾಮನೆ, ಶಿವಾನುಭವ ಕೇಂದ್ರವಾಗಿಸಿದರು. ಈ ಕಾರಣಕ್ಕಾಗಿಯೇ ದೇಶದಾದ್ಯಂತ ಶರಣ–ಶರಣೀಯರು ಕಲ್ಯಾಣ ಪುರದೆಡೆಗೆ ಬಂದರು. ಅಂದಿನ ಸಮಾಜದಲ್ಲಿ ಕಂಡುಂಡ ಅನುಭವ, ತತ್ವಾದರ್ಶಗಳನ್ನು, ಕಾಯಕ ಪ್ರಜ್ಞೆಯನ್ನು ಪ್ರಸಾರ ಮಾಡಲು ಜಂಗಮ ಪಡೆಯನ್ನೆ ಕಟ್ಟಿದರು. ಅದು ಶರಣರ ಆಚಾರ, ವಿಚಾರಗಳಿಂದ ಸಮಸಮಾಜ ನಿರ್ಮಾಣಕ್ಕಾಗಿ, ನೈತಿಕ ಮೌಲ್ಯಗಳನ್ನು ಜನಸಾಮಾನ್ಯರಿಗೆ ಮೂಡಿಸಲು ಶರಣರು, ಸಂತರು ಸಂಚರಿಸುತ್ತಿದ್ದರು. ಹೀಗೆ ಉರಿಲಿಂಗದೇವನೆಂಬ ಶರಣ ನೆರೆಯ ಮಹಾರಾಷ್ಟ್ರದಿಂದ ಕಲ್ಯಾಣದ ಕ್ರಾಂತಿಕಾರಕ ವಿಚಾರಗಳಿಂದ ಪ್ರಭಾವಿತನಾಗಿ ಬಂದನು. ನಂತರ ಮಹಾರಾಷ್ಟ್ರದ ನಾಂದೇಡ ಜಿಲ್ಲೆಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡು ಪ್ರತಿ ಹಳ್ಳಿಗೆ ಒಂದು ರಾತ್ರಿ, ಪಟ್ಟಣಕ್ಕೆ ಪಂಚರಾತ್ರಿ ಎಂಬಂತೆ ಸಂಚರಿಸುತ್ತಾ ಜನ ಜಾಗೃತಿ ಮೂಡಿಸುತ್ತಿದ್ದ. ಹೀಗೆ ಸಂಚರಿಸುತ್ತಾ ನಂದವಾಡ ಗ್ರಾಮಕ್ಕೆ ಬಂದ. ಆ ಊರಲ್ಲಿ ಸೂರಯ್ಯನೆಂಬಾತನಿಗೆ ಲಿಂಗ ದೀಕ್ಷೆಯನ್ನು ಉರಿಲಿಂಗದೇವ ನೀಡುತ್ತಿದ್ದ. ಅದೇ ಸಂದರ್ಭದಲ್ಲಿ ಪೆದ್ದಣ್ಣ ಅದೇ ಮನೆಗೆ ಹೊಂಚು ಹಾಕಿ ಕಳ್ಳತನ ಮಾಡಲು ಬಂದಿದ್ದ. ಆ ಮನೆಯಲ್ಲಿ ನಡೆದ ಶಿವಪೂಜೆ, ಲಿಂಗದೀಕ್ಷೆ ಕೊಡುವುದನ್ನು ಪೆದ್ದಣ್ಣ ಕಳ್ಳತನದಿಂದ ಬೆಳಕಿಂಡಿಯಲ್ಲಿ ಭಾವಪರವಶನಾಗಿ ನೋಡುತ್ತಾ ಅಂದೇ ಮನಃಪರಿವರ್ತನೆ ಹೊಂದಿ ತಾನು ಕೂಡ ಲಿಂಗದೀಕ್ಷೆಯನ್ನು ಪಡೆಯಬೇಕೆಂಬ ನಿರ್ಧಾರಕ್ಕೆ ಬರುತ್ತಾನೆ. ಆಗ ಪೆದ್ದಣ್ಣ ಉರಿಲಿಂಗ ದೇವನಲ್ಲಿ ನನಗೂ ಲಿಂಗದೀಕ್ಷೆಯನ್ನು ಕೊಡಿ ಎಂದು ವಿನಂತಿಸಿಕೊಳ್ಳುತ್ತಾನೆ, ಆದರೆ ಉರಿಲಿಂಗ ದೇವ ನಿರಾಕರಿಸುತ್ತಾರೆ. ಅಂದಿನಿಂದ ಪೆದ್ದಣ್ಣ ಪ್ರತಿನಿತ್ಯವು ಅರಣ್ಯದಿಂದ ಕಟ್ಟಿಗೆ ಕಡದು ತಂದು ಉರಿಲಿಂಗದೇವರ ಮಠಕ್ಕೆ ಹಾಕುತ್ತಾನೆ. ಇದನ್ನು ಗಮನಿಸಿದ ಉರಲಿಂಗದೇವರು ಇದಕ್ಕೆ ಪ್ರತಿಯಾಗಿ ಕೂಲಿ ಹಣ ನೀಡಲು ಹೋಗುತ್ತಾರೆ. ಆದರೆ ಪೆದ್ದಣ್ಣ ನನಗೆ ಹಣ ಬೇಡ ಲಿಂಗದೀಕ್ಷೆ ಬೇಕೆಂದು ಕೇಳಿಕೊಳ್ಳುತ್ತಾನೆ. ಆದರು ಕೂಡ ಉರಿಲಿಂಗದೇವ ಲಿಂಗದೀಕ್ಷೆ ನೀಡುವುದಿಲ್ಲ. ಆದರೂ ಮತ್ತೆ ಅದೇ ಮಠಕ್ಕೆ ಶ್ರಮಪಟ್ಟು ಅರಣ್ಯದಿಂದ ಕಟ್ಟಿಗೆ ತಂದು ಹಾಕುವ ಕಾರ್ಯದಲ್ಲಿ ನಿರತನಾಗುತ್ತಾನೆ. ಪೆದ್ದಣ್ಣನ ಹಠಮಾರಿತನ ನೋಡಿದ ಉರಲಿಂಗದೇವರು ಸಿಟ್ಟಿನಿಂದಲೋ ಅಥವಾ ಮಮಕಾರದಿಂದಲೋ ಒಂದು ಚಿಕ್ಕ ಕಲ್ಲನ್ನು ಆತನೆಡೆಗೆ ಎಸೆದು 'ಘೇ ದಗಡ ಜಾ' ಎನ್ನುತ್ತಾರೆ. ಆಗ ಆ ಪೆದ್ದಣ್ಣ ಇದೇ ಗುರುಮಂತ್ರವೆಂದು ಪಠಿಸುತ್ತಾ, ಅವರು ಎಸೆದ ಕಲ್ಲೇ ಲಿಂಗವೆಂದು ಪೂಜಿಸುತ್ತಾ ಧ್ಯಾನ ಶೀಲನಾಗುತ್ತಾನೆ. ಪೆದ್ದಣ್ಣನ ಭಕ್ತಿ, ನಿಷ್ಠೆ, ಪ್ರಾಮಾಣಿಕತೆಗೆ ಮೆಚ್ಚಿ ಕೊನೆಗೆ ಉರಿಲಿಂಗದೇವ ಲಿಂಗದೀಕ್ಷೆ ಕೊಟ್ಟು ಆಶೀರ್ವದಿಸುತ್ತಾನೆ. ಇದರಿಂದಾಗಿ ಪೆದ್ದಣ್ಣ ಉರಿಲಿಂಗ ಪೆದ್ದಿಯಾಗಿ ದೈವಿಕತೆಯಿಂದ ಪೂರ್ವದಲ್ಲಿನ ಅವಗುಣ, ಅನಾಚಾರಗಳನ್ನು ತೊರೆದು ಮಹಾಶರಣನಾಗಿ ಪರಿವರ್ತನೆ ಹೊಂದುತ್ತಾನೆ.

ಉರಿಲಿಂಗ ಪೆದ್ದಿಯ ಪವಾಡ ಕುರಿತು ಒಂದು ಐತಿಹ್ಯವಿದೆ. ಇಂದಿನ ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಕಂಧಾರ ಎನ್ನುವಲ್ಲಿ ನಂದನೆಂಬ ರಾಜನು ಒಂದು ಕೆರೆಯನ್ನು ಕಟ್ಟಿಸುತ್ತಾನೆ. ಆದರೆ ನೀರು ಬರುವುದಿಲ್ಲ, ನಿರಾಸೆಯಾಗುತ್ತಾನೆ. ಆಗ ಉರಿಲಿಂಗ ಪೆದ್ದಿಯ ಮಹಿಮೆಯನ್ನು ಕೇಳಿದ ಅರಸ ಇವರನ್ನು ಕರೆಸುತ್ತಾನೆ. ಆಗ ಉರಿಲಿಂಗ ಪೆದ್ದಿಯವರು ಗುರುಮಂತ್ರವನ್ನು ಪಠಿಸಿ ಕೆರೆಯ ಒಳಗಿನ ಕಲ್ಲೊಂದನ್ನು ಕಿತ್ತಿ ತೆಗೆದು ನೀರು ಚಿಮ್ಮುವಂತೆ ಮಾಡುತ್ತಾನೆ. ಇದರಿಂದಾಗಿ ಉರಿಲಿಂಗ ಪೆದ್ದಿಯ ಕೀರ್ತಿ ಎಲ್ಲಡೆ ಹಬ್ಬುತ್ತದೆ. ಇದನ್ನರಿತ ಉರಿಲಿಂಗದೇವ ಶಿಷ್ಯನ ಭಕ್ತಿ, ನಿಷ್ಠೆಗೆ ಮೆಚ್ಚಿ ಉರಿಲಿಂಗ ದೇವರು ತಮ್ಮ ಮಠದ ಪೀಠಾಧಿಪತಿಯನ್ನಾಗಿ ನೇಮಿಸುತ್ತಾರೆ. ಅಂದಿನಿಂದ

ಉರಿಲಿಂಗ ಪೆದ್ದಿ ಸಂಸ್ಕೃತ, ಕನ್ನಡ ಭಾಷೆಯಲ್ಲಿ ಪ್ರವೀಣನಾಗಿ ನೂರಾರು ವಚನಗಳನ್ನು ರಚಿಸುತ್ತಾನೆ. ಉರಿಲಿಂಗ ಪೆದ್ದಿ ರಚಿಸಿರುವ ಸುಮಾರು 362 ವಚನಗಳು ಉಪಲಬ್ಧವಾಗಿವೆ. ಒಬ್ಬ ಸಾಮಾನ್ಯ ಪೆದ್ದಣ್ಣ, ಶರಣ ಉರಿಲಿಂಗ ಪೆದ್ದಿಯಾಗಿ ಅಗಾದ ಜ್ಞಾನ, ಪಾಂಡಿತ್ಯ ಪಡೆದು ಅಪ್ಪಟ ಶಿವಭಕ್ತನಾಗಿ ಸಕಲ ಶಾಸ್ತ್ರಂಗಳಲ್ಲಿ ಪಾರಂತನಾದದು ಬೆರಗುಗೊಳಿಸುವಂತದ್ದು.

ಈತ ಮೂಲತಃ ಆಂಧ್ರ ಪ್ರದೇಶದ ಮೂಲದಾತ. ತೆಲುಗಿನಲ್ಲಿ ಪೆದ್ದಣ್ಣ ಎಂದರೆ ಹಿರಿಯಣ್ಣ, ಅನುಭಾವಿ ಎಂದರ್ಥ. ಇತನು ಅಸ್ಪೃಶ್ಯ ಸಮಾಜದಲ್ಲಿ ಹುಟ್ಟಿ ಬೆಳೆದಾತ. ಮುಂದೆ ಶರಣರ ಕ್ರಾಂತಿಕಾರಕ ವಿಚಾರಗಳ ಸೆಳೆವಿನಿಂದಾಗಿ ಅವಗುಣ, ಅನಾಚಾರವನ್ನು ತೊರೆದು, ಗುರುವನ್ನೇ ಮೀರಿಸುವ ಶರಣನಾಗಿ ಹೊರಹೊಮ್ಮಿದ. ಅವರ ವಚನಗಳಲ್ಲಿನ ವಿಶಿಷ್ಟತೆ ಮತ್ತು ವೈಚಾರಿಕತೆಗಳನ್ನು ಕಾಣಬಹುದಾಗಿದೆ.

***ಅಂಗಭಾವಹಿಂಗದೆ ಮಜ್ಜನಕ್ಕೆರೆವಿರಿ,***
***ಅರ್ಪಿತವನರಿಯದೆ ಅರ್ಪಿಸುವಿರಿ,***
***ಅರ್ಪಿತ ಸೆವೆಯಿತ್ತೇ? ಲಿಂಗ ಸವೆಯಿತ್ತೇ?***
***ಕರ್ಮಣಾ ಮನಸಾ ವಾಚಾ ಗುರುಣಾಂ ಭಕ್ತಿವತ್ಸಲ!***
***ಶರೀರಮರ್ಥಂ ಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್***
***ಇಂತೆಂದುದಾಗಿ, ತನುವರ್ಪಿತ ಗುರುವಿಂಗೆ,***
***ಮನವರ್ಪಿತ ಲಿಂಗಕ್ಕೆ, ಧನವರ್ಪಿತ ಜಂಗಮಕ್ಕೆ***
***ಇಂತೀ ತ್ರಿವಿಧಕ್ಕೆ ಅರಿದರ್ಪಿಸಬಲ್ಲಡೆ ಅರ್ಪಿತ,***
***ಈ ತ್ರಿವಿಧ ಸವೆಯದೆ ಅರ್ಪಿಸುವ ಅರ್ಪಿತವೆಂತೊ***
***ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ?***

ಎಂಬ ವಚನದ ಸಾಲುಗಳಲ್ಲಿ ಮೂಡಿ ಬಂದ ವೈಚಾರಿಕ ಚಿಂತನೆಗಳನ್ನು ಅರಿತುಕೊಳ್ಳಬಹುದು. ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಜೀವನ ನಿರ್ವಹಣೆಗಾಗಿ ದುಡಿಮೆ ಮಾಡಲೇಬೇಕು. ಕೇವಲ ಹೊಟ್ಟೆಪಾಡಿಗಾಗಿ ಮಾಡುವ ಕೆಲಸ ವೃತ್ತಿ ಎನಿಸುತ್ತದೆ. ನಾವು ಮಾಡುವ ಕೆಲಸ ವ್ಯಕ್ತಿಗೂ ಹಾಗೂ ಸಮಾಜಕ್ಕೂ ಉಪಕಾರವಾಗುವಂತಿರಬೇಕು. ಅದು ಸಮಾಜದ ಅವಶ್ಯಕತೆಗಳನ್ನು ಪೂರೈಸುವಂತಿರಬೇಕು. ಇಂತಹ ಕೆಲಸವನ್ನೇ ಸಮರ್ಪಣ ಭಾವದಿಂದ ಪೂಜೆ ಎಂದು ಮಾಡಿದಲ್ಲಿ ಅದು ಕಾಯಕವೆನಿಸುತ್ತದೆ. ಸತ್ಯಶುದ್ಧ ಕಾಯಕದಲ್ಲಿ ತೊಡಗಿಸಿಕೊಂಡ ಶರಣರ ನಡೆ–ನುಡಿಗಳು ಮಾರ್ಮಿಕವಾಗಿವೆ.

***ಅಮೃತ ಸರ್ವರಿಗೂ ಅಮೃತವಾಗಿಪ್ಪುದಲ್ಲದೆ***
***ಕೆಲಬರಿಗೆ ಅಮೃತವಾಗಿ, ಕೆಲಬರಿಗೆ ವಿಷವಾಗುವುದು ನೋಡಾ***
***ಎಂತು, ಅಂತೆ,***
***ಶ್ರೀಗುರು ಸರ್ವರಿಗೂ ಗುರುವಾಗಿರಬೇಕಯ್ಯಾ***
***ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.***
***ಅಮೃತ ಸೇವನೆಯಾದ ಬಳಿಕ***
***ಭಿನ್ನರುಚಿಯ ನಿಶ್ಚಯಿಸಲುಂಟೆ?***
***ಸತ್ಯಶಾಂತಿ ಜ್ಞಾನವಿಂಬುಗೊಂಡ ಮಹಾಪುರುಷಂಗೆ***
***ಸುಖದ ಪದವ ನಿಶ್ಚಯಿಸಲುಂಟೆ?***
***ಸದ್ಗುರುಕಾರುಣ್ಯವ ಪಡೆದ ಮಹಾಭಕ್ತಂಗೆ***
***ಮುಕ್ತಿಯ ನಿಶ್ಚಯಿಸಲುಂಟೆ?***
***ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ***

ಈ ಮೇಲಿನ ವಚನದಲ್ಲಿನ ಒಳಾರ್ಥ. ಸಮಾಜದಲ್ಲಿನ ತಾರತಮ್ಯ, ಭೇದ ಭಾವ ಅಸಮಾನತೆಯನ್ನು ಎತ್ತಿ ತೋರುತ್ತದೆ. ಗುರುವಾದವನು ಎಲ್ಲರಿಗೂ ನೈತಿಕ ಮೌಲ್ಯ, ಒಳ್ಳೆಯ ಗುಣಗಳನ್ನು ಮೈಗೂಡಿಸಿಕೊಳ್ಳವಂತೆ ಮಾರ್ಗದರ್ಶನ ನೀಡಬೇಕು. ಇಂತಹ ಆದರ್ಶಪ್ರಾಯ ಚಿಂತನೆಗಳನ್ನು ಹೊಂದಿದಾತ ನಿಜವಾದ ಗುರುವೆನಿಸಿಕೊಳ್ಳುತ್ತಾನೆ. ಅಮೃತ ಎಲ್ಲರಿಗೂ ಹಿತವಾಗಿ ರುಚಿಸಬೇಕು, ಆದರೆ ಇಲ್ಲಿ ವಿಭಿನ್ನವಾಗಿ ರುಚಿಸುತ್ತಿರುವುದರ ಒಳಮರ್ಮ ಅರಿಯಬೇಕಿದೆ. ಕೆಲವರಿಗೆ ಶ್ರೇಷ್ಠ, ಇನ್ನೂ ಕೆಲವರಿಗೆ ಕನಿಷ್ಠವೆಂಬ ಭೇದಭಾವವನ್ನ ಕಿತ್ತೆಸೆಯದ ಹೊರತು ಮುಕ್ತಿ ಸಾದ್ಯವಿಲ್ಲವೆಂಬ ಸತ್ಯವನ್ನ ಸಾರುತ್ತಾರೆ. ಸತ್ಯ, ಶಾಂತಿ, ಜ್ಞಾನ ಹೊಂದಿವ ಮಹಾಪುರುಷನಿಗೆ

ಸದ್ಗುರು ಕಾರುಣ್ಯವ ಪಡೆದ ಮಹಾಭಕ್ತ ಪ್ರಾಮಾಣಿಕತೆ, ಸತ್ಯ, ಕಾಯಕ ಪ್ರಜ್ಞೆಗಳನ್ನು ಮೈಗೂಡಿಸಿಕೊಂಡಾತ ಯಾವುದೇ ಕಾರಣಕ್ಕೂ ಹಿಂಜರಿಯುವ ಅಗತ್ಯವಿಲ್ಲವೆಂಬುದನ್ನು ಅರಿತುಕೊಳ್ಳಬಹುದಾಗಿದೆ. ಡಾಂಭಿಕ ಭಕ್ತರು ಸಮಾಜದಲ್ಲಿ ಏನೆಲ್ಲ ಕುತಂತ್ರವನ್ನು ಮಾಡಿ ಜನಸಾಮಾನ್ಯರನ್ನು ವಂಚಿಸಿ, ಮೋಸ ಮಾಡುತ್ತಾ ದ್ವೇಷ, ಅಸೂಯೆ, ಅನ್ಯಾಯವನ್ನು ಬಿತ್ತುತ್ತಿದ್ದಾರೆ ಎಂಬ ವಾಸ್ತವಿಕ ಸತ್ಯವನ್ನು ನೇರವಾಗಿ ನುಡಿದ್ದಾರೆ. ಸುಖ, ಮುಕ್ತಿ ಪದವ ನಿಶ್ಚಯಿಸಲುಂಟೆ ಎಂದು ಪ್ರಶ್ನಿಸುತ್ತಾನೆ ಉರಿಲಿಂಗ ಪೆದ್ದಿ.

ಒಟ್ಟಾರೆಯಾಗಿ ಸಮಸಮಾಜ ನಿರ್ಮಾಣಕ್ಕಾಗಿ ಹನ್ನೆರಡನೆಯ ಶತಮಾನದ ನೂರಾರು ಶರಣ–ಶರಣೀಯರು ತೊಡಗಿಸಿಕೊಂಡು ಜನರಲ್ಲಿ ಅರಿವಿನ ಜ್ಯೋತಿಯನ್ನು ಬೆಳಗಿಸಿದರು. ಒಬ್ಬ ಸಾಮಾನ್ಯ ಪೆದ್ದಣ್ಣ ಕಲ್ಯಾಣದ ವಚನಕಾರರ ಕ್ರಾಂತಿಯಿಂದಾಗಿ ಮನಃಪರಿವರ್ತಿತನಾಗಿ ಜನಪರ, ಜೀವಪರ ಚಿಂತನೆಗಳನ್ನು ಮೈಗೂಡಿಸಿಕೊಂಡು ಮೊದಲಿನ ಅವಗುಣಗಳನ್ನು ತ್ಯೇಜಿಸಿದ. ಇದಕ್ಕೆಲ್ಲ ಕಾರಣ ಅಂದಿನ ಶರಣರ ಆದರ್ಶ ನಡೆ–ನುಡಿ, ಆಚಾರ–ವಿಚಾರ, ಸತ್ಯ–ನಿಷ್ಠೆ, ಪ್ರಾಮಾಣಿಕತೆಯ ಪ್ರಭಾವದಿಂದ ಎಂಬುದು ವಿದಿತವಾಗುತ್ತದೆ. ಪೆದ್ದಣ್ಣ ತಾನು ಮಾಡುವ ಕೆಲಸ ತಪ್ಪೆಂದರಿತು; ಶಿವಾನುಭವ, ಧ್ಯಾನ, ಪ್ರಾಮಾಣಿಕ ಭಕ್ತಿ, ಕಾಯಕ ಇವು ಮನುಷ್ಯನನ್ನಾಗಿಸುತ್ತವೆ. ಇವು ಮೋಕ್ಷದೆಡೆಗೆ ಕೊಂಡೊಯ್ಯುತ್ತವೆ ಎಂಬುದನ್ನು ಅರಿತುಕೊಂಡು ಉರಿಲಿಂಗಿಪೆದ್ದಿ ಶರಣನಾಗಿ ಪರಿವರ್ತಿತನಾದ. ಸಮಾಜದಲ್ಲಿನ ಅನ್ಯಾಯ, ಅಸಮಾನತೆ, ಜಾತಿ, ಮತ, ಪಂಥ, ಲಿಂಗ ಭೇದಭಾವಗಳನ್ನು ಕಿತ್ತೆಸೆಯಲು ಕಂಕಣಬದ್ಧರಾಗಿ ಶರಣರು ಬದುಕಿನುದ್ದಕ್ಕೂ ಯತ್ನಿಸಿದರು. ಈ ನಿಟ್ಟಿನಲ್ಲಿ ಉರಿಲಿಂಗ ಪೆದ್ದಿ ಶರಣ ಗುರುವನ್ನೇ ಮೀರಿಸುವ ರೀತಿಯಲ್ಲಿ ಅಪ್ಪಟ ಶಿವಭಕ್ತ, ಪವಾಡ ಪುರಷನಾಗಿ ಜನಮನ್ನಣೆಯನ್ನು ಪಡೆದ ಅಪರೂಪದ ಶರಣ. ಇಂತಹ ಶರಣರ ನಡೆ–ನುಡಿ, ಚಿಂತನೆಗಳು ಇಂದಿನ ಆಧುನಿಕ ಸಮಾಜದ ಜನರಿಗೆ ಅವಶ್ಯಕ.

**ಪರಾಮರ್ಶನ/ಆಕರ ಗ್ರಂಥಗಳು**


- ಅಬ್ದುಲ್ ಬಷೀರ್. ಬಿ. (2019). *ಧರ್ಮ ಸಮನ್ವಯ ಸಾಹಿತ್ಯ ವಿಮರ್ಶೆ.* ಕನ್ನಡ ಸಾಹಿತ್ಯ ಪರಿಷತ್ತು.
- ಕಾಶೀನಾಥ ಅಂಬಲಗೆ. (ಸಂ.) (2000). *ಮಹಿಳಾ ವಚನ.* ಪ್ರಗತಿ ಪ್ರಕಾಶನ.
- ಪದ್ಮಾಕರ ಅಶೋಕ ಕುಮಾರ ಮಟ್ಟಿ. (2020). *ವಚನಕಾರ ಉರಿಲಿಂಗ ಪೆದ್ದಿ.* ಮಾತೋಶ್ರೀ ಈರಮ್ಮ ವಡ್ಡನಕೇರಿ ಪ್ರತಿಷ್ಠಾನ.
- ರಂ.ಶ್ರೀ.ಮುಗಳಿ. (2018). *ಕನ್ನಡ ಸಾಹಿತ್ಯ ಚರಿತ್ರೆ.* (ಪರಿಷ್ಕೃತ). ಗೀತಾಬುಕ್ ಹೌಸ್.
- ರಘುಶಂಖ ಭಾತಂಬ್ರಾ. (2005). *ಕರ್ನಾಟಕೇತರ ಶರಣ ಶರಣೆಯರು.* ಗುಲ್ಬರ್ಗಾ ವಿಶ್ವವಿದ್ಯಾಲಯ.
- ರಾಧಾಕೃಷ್ಣ ಕೆ ವಿ. (2012). *ಆಯ್ದ ವಚನಗಳು.* ಅಂಬಾ ಪ್ರಕಾಶನ.
- *ಶರಣ ಶರಣೆಯರ ಜೀವನ ಚರಿತ್ರೆ.* (1998). ಮುರುಘರಾಜೇಂದ್ರ ಮಠ ಚಿತ್ರದುರ್ಗ.
- ಶರಣ ಉರಿಲಿಂಗ ಪೆದ್ದಿಯವರ 363 ವಚನಗಳು. (2023, ಏಪ್ರಿಲ್ 22). *ವಿಷಯ.* https://www.vishaya.in/vachana/sharana-urilinga-peddi-vachana/
- ಶ್ರೀ ಪಂಚಾಕ್ಷರ ಉರಿಲಿಂಗಪೆದ್ದಿ ಸ್ವಾಮಿ. (ಸಂ.) (2017). ಕಾಳವ್ವೆ, ಉರಿಲಿಂಗದೇವ ಮತ್ತು ಶರಣ ಉರಿಲಿಂಗಪೆದ್ದಿ ವಚನಗಳ ಸಂಗ್ರಹ. ಶರಣ ಉರಿಲಿಂಗಪೆದ್ದಿ ಮಠ ಟ್ರಸ್ಟ್.